**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ನ್ಯಾಯಾಲಯ, ಕಾರವಾರ**

**ಸಿ.ಸಿ.ನಂಃ 2480/2024**

**ಪಿ ಡಬ್ಲ್ಯೂಃ 01**

| | |
|---|---|
| ಸಾಕ್ಷಿದಾರರ ಹೆಸರು | ರಮೇಶ್ ಗಜಾನನ ಶೆನ್ವಿ |
| ತಂದೆಯ ಹೆಸರು | ಗಜಾನನ ಶೆನ್ವಿ |
| ವಯಸ್ಸು | 55 ವರ್ಷ |
| ಉದ್ಯೋಗ | ಸಿ ಇ ಓ, ಮಾತಾ ಮಹಾಲಕ್ಷ್ಮೀ ಸೌಹಾರ್ದ ಪತ್ತಿನ ಸಹಕಾರ ಸಂಘ |
| ವಾಸ್ತವ್ಯ | ಕಾರವಾರ |

**(ಇಂದು ದಿನಾಂಕಃ 04.11.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

ಮಾನ್ಯ ಸರ್ವೋಚ್ಚ ನ್ಯಾಯಾಲಯದ (2014) 5 ಎಸ್.ಸಿ.ಸಿ. 590 ಇಂಡಿಯನ್ ಬ್ಯಾಂಕ್ಸ್ ಅಸೋಷಿಯೇಶನ್ ವಿರುದ್ಧ ಯುನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿನ ತೀರ್ಪನ್ನು ಆಧರಿಸಿ ಈ ಪ್ರಕರಣದಲ್ಲಿ ಪಿರ್ಯಾದುದಾರ ಪರ ವಕೀಲರು ಸಲ್ಲಿಸಿರುವ ಜ್ಞಾಪನವನ್ನು ಪರಿಗಣಿಸಿ, ಈ ಹಿಂದೆ ಪಿರ್ಯಾದುದಾರರು ತಮ್ಮ ಸ್ವ ಪ್ರತಿಜ್ಞಾ ಹೇಳಿಕೆಯ ಸಲುವಾಗಿ ಸಲ್ಲಿಸಿದ್ದ ಪ್ರಮಾಣ ಪತ್ರವನ್ನು ಪಿರ್ಯಾದುದಾರರ ಪರ ಸಾಕ್ಷ್ಯವನ್ನಾಗಿ ಪರಿಗಣಿಸಲಾಯಿತು. ಈ ಪ್ರಕರಣದಲ್ಲಿ ಸ್ವ ಪ್ರತಿಜ್ಞಾ ಹೇಳಿಕೆಯನ್ನು ದಾಖಲಿಸುವಾಗ ಪಿರ್ಯಾದಿಯೊಂದಿಗೆ ಸಲ್ಲಿಸಲಾದ ದಾಖಲೆಗಳನ್ನು ನಿಶಾನೆಗೊಳಿಸಿರದ ಕಾರಣ ಸದ್ರಿ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಗೊಳಿಸಲಾಯಿತು.

(1. ದಿಃ 19-06-2024 ರ ಸ್ಟೇಟ್ ಬ್ಯಾಂಕ್ ಇಂಡಿಯಾ, ಕಾರವಾರ ಶಾಖೆಯ ನಂಬರ್ 134454 ರ ರೂ. 1,85,000/- ದ ಚೆಕ್‌ನ್ನು ನಿಪಿ-1,

2. ಸಾಕ್ಷಿ ಸದರಿ ಚೆಕ್ ನಲ್ಲಿ ಕಾಣುವ ಸಹಿಯನ್ನು ನೋಡಿ ಅದು ಆರೋಪಿಯ ಸಹಿ ಎಂದು ಹೇಳಿದ್ದಕ್ಕೆ ಆರೋಪಿಯ ಸಹಿಯನ್ನು ನಿಪಿ-1 (ಎ),

3. ದಿಃ 20-06-2024 ರ ಚೆಕ್ ರಿಟರ್ನ ಮೆಮೋವನ್ನು ನಿಪಿ-2,

4. ದಿಃ 26-06-2024 ರ ವಕೀಲರ ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ-3,

5. ಅಂಚೆ ರಶೀದಿಯನ್ನು ನಿಪಿ-4,

6. ಅಂಚೆ ಸ್ವೀಕೃತಿ ಪತ್ರವನ್ನು ನಿಪಿ-5,

7. ದಿನಾಂಕ 09-06-2016 ರ ಠರಾವು ಪ್ರತಿಯನ್ನು ನಿಪಿ-6,

8. 14-02-2022 ರ ಅಧಿಕಾರ ಪತ್ರ ನಿಪಿ-7 ಎಂದು ಗುರುತಿಸಲಾಯಿತು.)

ಸಿ.ಸಿ.ನಂಃ 2480/2024

ಪಿ ಡಬ್ಲ್ಯೂಃ 01

ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಕಾರವಾರ